MASTERMIND

₹599 ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ

## 5 ವರ್ಷಗಳ ಇಂಟಿಗ್ರೇಟೆಡ್ ಕೋರ್ಸ್

# ಭೂಗೋಳ ಬಿ.ಎಸ್ಸಿ–ಎಂ.ಎಸ್ಸಿ



### ಕೋರ್ಸ್ ವೈಶಿಷ್ಟ್ಯ



- ವಿದ್ಯಾರ್ಥಿಗಳಿಗೆ ಕ್ಷೇತ್ರ ಕಾರ್ಯದ ಕುರಿತು ಅರಿವು ಮೂಡಿಸುವುದು,
- ಗಮನಿಸುವಿಕೆಯ ಕಲಿಕೆ
- ಭೌಗೋಳಿಕ ಚಿತ್ರಣವನ್ನು ಅಳತೆ/ ಅರಿವು ಮೂಡಿಸುವ ವಿಧಾನ
- ಭವಿಷ್ಯದಲ್ಲಿ ಸಂಭವಿಸುವ/ಬದಲಾಗುವ ಅಂಶಗಳನ್ನು ಕಲ್ಪನೆ ಮಾಡಿಕೊಳ್ಳಲು ಪ್ರೇರೇಪಿಸುವುದು,
- ಮನುಷ್ಯ ಮತ್ತು ಪರಿಸರದ ನಡುವಿನ ಬಾಂಧವ್ಯ ಅರ್ಥ ಮಾಡಿಕೊಳ್ಳಲು ಭೌತಿಕ, ಸಾಂಸ್ಕೃತಿಕ ಪರಿಸರ ಮತ್ತು ಜೀವ ಪರಿಸರದ ನಡುವಿರುವ ಸಂಬಂಧಗಳನ್ನು ತಿಳಿಯುವುದು
- ಭೂಮಿಯ ಮೇಲೆ ನೀರು, ಗಾಳಿ ಮತ್ತು ಮಣ್ಣಿನ ನಡುವೆ ಒಂದಕ್ಕೊಂದು ಹೇಗೆ ಸಂಪರ್ಕವೇರ್ಪಟ್ಟಿದೆ ಎಂಬುದನ್ನು ಕಲಿಸುವುದು.

ಆತ್ರೇಯ

ವಿಶ್ವವಿದ್ಯಾಲಯ ಮಟ್ಟದಲ್ಲಿ ಮೊದಲ ಬಾರಿಗೆ 'ರಾಷ್ಟ್ರೀಯ ಹೊಸ ಶಿಕ್ಷಣ ನೀತಿ 2020' ಅನುಷ್ಠಾನಗೊಳಿಸುತ್ತಿರುವ ಬೆಂಗಳೂರು ವಿಶ್ವವಿದ್ಯಾಲಯ, 'ಭೂಗೋಳ ವಿಜ್ಞಾನ'ದಲ್ಲಿ ಹೊಸದಾಗಿ 'ಬಿ.ಎಸ್ಸಿ ಮತ್ತು ಎಂ.ಎಸ್ಸಿ ಸಂಯೋಜಿತ (ಇಂಟಿಗ್ರೇಟೆಡ್-ಐಎಂ.ಎಸ್ಸಿ)' ಐದು ವರ್ಷದ ಅವಧಿಯ ಕೋರ್ಸ್ ಆರಂಭಿಸುತ್ತಿದೆ.

ವಿದ್ಯಾರ್ಥಿಗಳ ಕೌಶಲ ವೃದ್ಧಿ, ಉದ್ಯೋಗಾವಕಾಶ ಹಾಗೂ ಜಾಗತಿಕ ಮಟ್ಟದಲ್ಲಿ ಇತರರ ಜೊತೆ ಪ್ರತಿಸ್ಪರ್ಧಿಸುವ ಉದ್ದೇಶದಿಂದ ಹೊಸ ಕೋರ್ಸ್ ವಿನ್ಯಾಸಗೊಳಿಸಲಾಗಿದೆ. ಮಾತ್ರವಲ್ಲ, ಈ ಕೋರ್ಸ್‌ನಲ್ಲಿ ಕಾರ್ಟೋಗ್ರಾಫಿಕ್ ತಂತ್ರಗಳು, ಯುಟಿಲಿಟಿ ಮ್ಯಾಪಿಂಗ್, ಡ್ರೋನ್ ಮ್ಯಾಪಿಂಗ್ ಮತ್ತು ಆರ್-ಪ್ರೋಗ್ರಾಮಿಂಗ್‌ನಂತಹ ತಾಂತ್ರಿಕ ಕೌಶಲಗಳನ್ನೂ ಕಲಿಸಲಾಗುತ್ತದೆ. ಇದೇ ಈ ಸಂಯೋಜಿತ ಪದವಿಯ ವೈಶಿಷ್ಟ್ಯ.

ಹಾಗೆಯೇ, ಈ ಕೋರ್ಸ್‌ನಲ್ಲಿ ವಿದ್ಯಾರ್ಥಿಗಳಿಗೆ ಮೂರು ರೀತಿಯಲ್ಲಿ ನಿರ್ಗಮಿಸುವ (Exit Options) ಆಯ್ಕೆಯನ್ನು ನೀಡಲಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಚೌಕಟ್ಟಿನಲ್ಲಿರುವ ಈ ಕೋರ್ಸ್, ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ (2022-23) ಆರಂಭವಾಗಲಿದೆ.

## ಯಾರಿಗೆ ಪ್ರವೇಶಾವಕಾಶ

ವಿಜ್ಞಾನ ವಿಷಯದಲ್ಲಿ ಪಿಯುಸಿ ಅಥವಾ 10+2 ತರಗತಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಈ ಕೋರ್ಸ್ ಪ್ರವೇಶಕ್ಕೆ ಅರ್ಜಿ ಸಲ್ಲಿಸಬಹುದು. ಕಲಾ ಮತ್ತು ವಾಣಿಜ್ಯ ವಿಭಾಗದಲ್ಲಿ ಭೂಗೋಳ ವಿಜ್ಞಾನವನ್ನು ಒಂದು ವಿಷಯವನ್ನಾಗಿ ಓದಿದ ವಿದ್ಯಾರ್ಥಿಗಳೂ ಅರ್ಜಿ ಸಲ್ಲಿಸಲು ಅರ್ಹರು.

> ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಭೂಗೋಳ ವಿಜ್ಞಾನ ವಿಷಯದಲ್ಲಿ ಬಿ.ಎಸ್ಸಿ – ಎಂ.ಎಸ್ಸಿ ಇಂಟಿಗ್ರೇಟೆಡ್ ಕೋರ್ಸ್(IMSc) ಆರಂಭವಾಗುತ್ತಿದೆ. 'ರಾಷ್ಟ್ರೀಯ ಹೊಸ ಶಿಕ್ಷಣ ನೀತಿ 2020' ಅಡಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಈ ಕೋರ್ಸ್ ಪ್ರತ್ಯೇಕ ಪದವಿಗಳ ಕಲಿಕೆಗಿಂತ ಭಿನ್ನವಾಗಿದೆ.

## ನಾನಾ ಕ್ಷೇತ್ರದಲ್ಲಿ ವಿಪುಲ ಅವಕಾಶ

ಪ್ರತ್ಯೇಕವಾಗಿ ಕಲಿಯುವ ಭೂಗೋಳ ವಿಜ್ಞಾನದ ಬಿ.ಎಸ್ಸಿ ಹಾಗೂ ಎಂ.ಎಸ್ಸಿ ಪದವಿಗಿಂತ ಈ 'ಐಎಂ.ಎಸ್ಸಿ ಇಂಟಿಗ್ರೇಟೆಡ್' ಕೋರ್ಸ್ ಹೆಚ್ಚು ಭಿನ್ನವಾಗಿದೆ. ಕೋರ್ಸ್ ಕಲಿಕೆಯ ಅಂತಿಮ ವರ್ಷದಲ್ಲಿ ಭೂಗೋಳ, ಜಿಯೊಇನ್‌ಫಾರ್ಮ್ಯಾಟಿಕ್ಸ್ ಹಾಗೂ ನೈಸರ್ಗಿಕ ವಿಪತ್ತು ನಿರ್ವಹಣೆ ವಿಶೇಷ ವಿಷಯಗಳ (Specialisation) ಆಯ್ಕೆಗೆ ಅವಕಾಶವಿದೆ. ಈ ಮೂರರಲ್ಲಿ ಒಂದು ವಿಷಯ ಆಯ್ಕೆ ಮಾಡಿಕೊಂಡು ಅಂತಿಮ ವರ್ಷದಲ್ಲಿ ಅಧ್ಯಯನ ನಡೆಸಬಹುದಾಗಿದೆ. ಇದು ದೇಶದಲ್ಲಿ ಮೊದಲ ಪ್ರಯತ್ನವಾಗಿದ್ದು, ಈ ಕೋರ್ಸ್ ಕಲಿಕೆಯಿಂದ ನಾನಾ ಕ್ಷೇತ್ರಗಳಲ್ಲಿ ವಿಪುಲ ಅವಕಾಶಗಳು ದೊರೆಯಲಿವೆ ಎನ್ನುತ್ತಾರೆ ಬೆಂಗಳೂರು ವಿಶ್ವವಿದ್ಯಾಲಯದ ಭೂಗೋಳ ವಿಜ್ಞಾನ ವಿಭಾಗದ ಚೇರ್ಮನ್ ಅಶೋಕ ಡಿ. ಹಂಜಗಿ.

ಇಂಧನ, ನೀರು, ಜೀವ ವೈವಿಧ್ಯ, ಹವಾಮಾನ, ನೈಸರ್ಗಿಕ ವಿಪತ್ತು, ಜನಸಂಖ್ಯೆ ಮತ್ತು ಇತರೆ ಪ್ರಮುಖ ವಿಷಯಗಳನ್ನು ಕೋರ್ಸ್ ತಿಳಿಸಿಕೊಡುತ್ತದೆ. ಭೂಮಿಯ ಮೇಲ್ಮೈ ಲಕ್ಷಣಗಳು, ಅಂತರ್ಜಲಮಟ್ಟ, ಭೂ ಕುಸಿತ, ಸರೋವರ, ಜಲ ಸಂಗ್ರಹಾಗಾರಗಳು ಮತ್ತು ನದಿ ಪಾತ್ರದ ಬಗ್ಗೆ ವೈಜ್ಞಾನಿಕ ವರದಿ ಸಿದ್ಧಪಡಿಸುವ ಜ್ಞಾನವೂ ಕೋರ್ಸ್‌ನಿಂದ ಬೆಳೆಯಲಿದೆ ಎಂಬುದು ಅವರ ಅಭಿಪ್ರಾಯ.

ಕೇಂದ್ರ ಲೋಕಸೇವಾ ಆಯೋಗ, ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನಕ್ಕೆ ನೆರವಾಗುವ ಜೊತೆಗೆ, ಉದ್ಯೋಗ ಪಡೆಯಲು ಕೋರ್ಸ್ ಸಹಾಯವಾಗುತ್ತದೆ ಎನ್ನುತ್ತಾರೆ ಅವರು.

## ಮೂರು ನಿರ್ಗಮನದ ಆಯ್ಕೆಗಳು

5 ವರ್ಷ ಅವಧಿ 10 ಸೆಮಿಸ್ಟರ್ ಒಳಗೊಂಡ ಕೋರ್ಸ್ ಇದಾಗಿದೆ. 'ರಾಷ್ಟ್ರೀಯ ಹೊಸ ಶಿಕ್ಷಣ ನೀತಿ 2020' ಅನ್ವಯ ಮೂರು ನಿರ್ಗಮನದ ಆಯ್ಕೆಗಳು ಕೋರ್ಸ್‌ನಲ್ಲಿವೆ.

- ಆರು ಸೆಮಿಸ್ಟರ್ (ಮೂರು ವರ್ಷ) ಪೂರ್ಣಗೊಳಿಸಿ ನಿರ್ಗಮಿಸಲು ಬಯಸುವ ವಿದ್ಯಾರ್ಥಿಗಳಿಗೆ ಬಿ.ಎಸ್ಸಿ (ಭೂಗೋಳ ವಿಜ್ಞಾನ) ಪದವಿ ನೀಡಲಾಗುತ್ತದೆ.
- 8 ಸೆಮಿಸ್ಟರ್ (4 ವರ್ಷ) ಪೂರ್ಣಗೊಳಿಸುವವರಿಗೆ ಬಿ.ಎಸ್ಸಿ (ಭೂಗೋಳ ವಿಜ್ಞಾನ) ಆನರ್ಸ್ ಪದವಿ ನೀಡಲಾಗುತ್ತದೆ.
- 10 ಸೆಮಿಸ್ಟರ್ (ಐದು ವರ್ಷ) ಪೂರ್ಣಗೊಳಿಸುವ ವಿದ್ಯಾರ್ಥಿಗಳಿಗೆ ಬಿ.ಎಸ್ಸಿ-ಎಂ.ಎಸ್ಸಿ 'ಇಂಟಿಗ್ರೇಟೆಡ್' ಪದವಿ ಜೊತೆಯಲ್ಲಿ ಭೂಗೋಳ ವಿಜ್ಞಾನ ಅಥವಾ ಭೂಗೋಳ ಇನ್‌ಫಾರ್ಮೆಟಿಕ್ಸ್ ಅಥವಾ ನೈಸರ್ಗಿಕ ವಿಪತ್ತು ನಿರ್ವಹಣೆ ವಿಶೇಷ ಅಧ್ಯಯನ ಅರ್ಹತೆ ದೊರೆಯಲಿದೆ.

## ಉದ್ಯೋಗಾವಕಾಶ

ಇಂಟಿಗ್ರೇಟೆಡ್ ಭೂಗೋಳ ವಿಜ್ಞಾನ ಪದವಿ(ಬಿ.ಎಸ್ಸಿ) ಪೂರ್ಣಗೊಳಿಸಿದವರಿಗೆ ಭಾರತೀಯ ಸರ್ವೆ ಇಲಾಖೆ, ಭಾರತೀಯ ಅರಣ್ಯ ಸರ್ವೇಕ್ಷಣಾ ಇಲಾಖೆ, ಹೈದರಾಬಾದ್‌ನಲ್ಲಿರುವ ಭಾರತೀಯ ಭತ್ತದ ತಳಿ ಸಂಶೋಧನಾ ಸಂಸ್ಥೆ, ರಾಷ್ಟ್ರೀಯ ಮಣ್ಣು ಸಮೀಕ್ಷೆ ಮತ್ತು ಭೂ ಬಳಕೆ ಯೋಜನಾ ಸಂಸ್ಥೆ, ನವದೆಹಲಿಯ ಭಾರತೀಯ ಜನಗಣತಿ ಸಂಸ್ಥೆ, ಡಿಆರ್‌ಡಿಎಒ, ಕಾಲೇಜು ಅಥವಾ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರು ಹಾಗೂ ಸರ್ಕಾರದ ವಿವಿಧ ಇಲಾಖೆ ಹುದ್ದೆಗಳಿಗೆ ಸೇರುವ ಅವಕಾಶವಿರುತ್ತದೆ.

ಕಾರ್ಟೋಗ್ರಾಫರ್, ನಿಸರ್ಗ ಸಂರಕ್ಷಣಾ ಅಧಿಕಾರಿ, ಶಾಲಾ ಶಿಕ್ಷಕರು, ಪ್ರವಾಸೋದ್ಯಮ ಅಧಿಕಾರಿ, ಸಾರಿಗೆ ಯೋಜನಾ ಅಧಿಕಾರಿ, ಸಹಾಯಕ ಪ್ರಾಧ್ಯಾಪಕ, ಭೌಗೋಳಿಕ ಸಂಶೋಧಕ ಸೇರಿ ನಾನಾ ಹುದ್ದೆಗಳಿಗೂ ಅರ್ಹತೆ ಹೊಂದಿರುತ್ತಾರೆ.

ಜಿಯೋಇನ್‌ಫಾರ್ಮೆಟಿಕ್ಸ್ ವಿಶೇಷ ವಿಷಯ ಕಲಿತವರಿಗೆ, ರಾಷ್ಟ್ರೀಯ ಸೂಕ್ಷ್ಮ ಸಂವೇದಿ ಅನ್ವಯಿಕ ಕೇಂದ್ರ, ಶಾಸ್ತ್ರ ಬಾಹ್ಯಾಕಾಶ ಅನ್ವಯಿಕ ಕೇಂದ್ರ, ರಾಜ್ಯ ಜಿಐಎಸ್ ಅಭಿವೃದ್ಧಿ ಕೋಶ, ಸಾರ್ವಜನಿಕ ಕಲ್ಯಾಣ ಇಲಾಖೆ, ಪರಿಸರ ಸರ್ವೇಕ್ಷಣಾ ಪ್ರಾಧಿಕಾರ (ಇಐಎ) ಹಾಗೂ ವಿವಿಧ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗಾವಕಾಶಗಳಿವೆ.

ನೈಸರ್ಗಿಕ ವಿಪತ್ತು ನಿರ್ವಹಣೆ ವಿಷಯದೊಂದಿಗೆ ಕೋರ್ಸ್ ಪೂರ್ಣಗೊಳಿಸಿದವರಿಗೆ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆ, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಭಾರತೀಯ ಹವಾಮಾನ ಇಲಾಖೆ, ಸ್ವಯಂ ಸೇವಾ ಸಂಸ್ಥೆಗಳು, ಅಗ್ನಿಶಾಮಕ ಹಾಗೂ ತುರ್ತು ಸೇವೆಗಳ ಇಲಾಖೆ ಹಾಗೂ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗಾವಕಾಶಗಳಿವೆ.

**ಮಾಹಿತಿಗಳಿಗಾಗಿ ಈ ಲಿಂಕ್ ಕ್ಲಿಕ್ ಮಾಡಿ:** https://eng.bangaloreuniversity.ac.in/science/geog, **ಇಮೇಲ್:** geography@bub.ernet.in

